# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 996 |
| 2. | ಸದಸ್ಯರ ಹೆಸರು | : | ಶ್ರೀ ಹೆಚ್.ಎಂ.ರಮೇಶ ಗೌಡ |
| 3. | ಉತ್ತರಿಸಬೇಕಾದ ದಿನಾಂಕ | : | 12.03.2020 |
| 4. | ಉತ್ತರಿಸುವ ಸಚಿವರು | : | ಸಣ್ಣ ನೀರಾವರಿ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2014 ಹಾಗೂ 2018ರ ತಿದ್ದುಪಡಿಗಳನ್ವಯ ಈಗಾಗಲೇ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. |
| ಆ. | ಈ ಪ್ರಾಧಿಕಾರದ ರೂಪು–ರೇಷೆಗಳೇನು; (ಕಾರ್ಯಕ್ರಮಗಳು) | ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ. |
| ಇ. | ರಾಜ್ಯದಲ್ಲಿರುವ ಕೆರೆಗಳನ್ನು ಈ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡಿಸಲಾಗುವುದೇ; | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2014 ಮತ್ತು 2018 ರ ತಿದ್ದುಪಡಿಯನ್ವಯ ರಾಜ್ಯದ ಎಲ್ಲಾ ಕೆರೆಗಳು ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಕೆರೆಗಳ ಸುಪರ್ದನ್ನು ಹೊಂದಿರುವ ಇಲಾಖೆಗಳ ಮೂಲಕ ಕೆರೆಗಳನ್ನು ನಿರ್ವಹಿಸಿ, ಸಂರಕ್ಷಿಸಲು ಮತ್ತು ಜೀರ್ಣೋದ್ಧಾರಗೊಳಿಸಲು ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ. |
| ಈ. | ಹಾಗಿದ್ದಲ್ಲಿ, ರಾಜ್ಯದಲ್ಲಿ ಒತ್ತುವರಿ ಯಾಗಿರುವ ಒಟ್ಟು ಕೆರೆಗಳ ಸಂಖ್ಯೆಯೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒತ್ತುವರಿಯಾಗಿರುವ ಒಟ್ಟು ಕೆರೆಗಳ ಸಂಖ್ಯೆ 6161. ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ. |
| ಉ. | ಒತ್ತುವರಿಯಾಗಿರುವ ಕೆರೆಗಳನ್ನು ತೆರವುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಕೆರೆಗಳ ಸುಪರ್ದನ್ನು ಹೊಂದಿರುವ ಇಲಾಖೆಗಳು ಬಿಡುಗಡೆಗೊಳಿಸುವ ಅನುದಾನದ ಮಿತಿಯಲ್ಲಿ ಆದ್ಯತೆಯ ಮೇರೆಗೆ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ವಹಿಸುತ್ತಿವೆ. ಅದರಂತೆ 2987 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ. ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ. |
| ಊ. | ತೆರವುಗೊಳಿಸಲಾಗುವ ಕೆರೆಗಳ ಪುನ:ಶ್ಚೇತನಕ್ಕೆ ಸರ್ಕಾರ ಅನುದಾನವನ್ನೇನಾದರೂ ನಿಗಧಿಪಡಿಸಿದೆಯೇ; | ಸರ್ಕಾರದಿಂದ ಬಿಡುಗಡೆಗೊಳಿಸುವ ಅನುದಾನದ ಮಿತಿಯಲ್ಲಿ ಲಭ್ಯತೆಯನುಸಾರ ಆದ್ಯತೆಯ ಮೇರೆಗೆ ಕೆರೆಗಳ ಸಂರಕ್ಷಣೆ ಮತ್ತು ಬೌಂಡರಿ ಟ್ರೆಂಚ್ / ತಂತಿ ಬೇಲಿ ನಿರ್ಮಿಸಲು ಕೆರೆಗಳ ಸುಪರ್ದನ್ನು ಹೊಂದಿರುವ ಇಲಾಖೆಗಳು ಕ್ರಮ ವಹಿಸುತ್ತಿವೆ. |

| | | |
|---|---|---|
| ಋ. | ಹಾಗಿದ್ದಲ್ಲಿ, ಎಷ್ಟು ಪ್ರಮಾಣ ಅನುದಾನವನ್ನು ನಿಗದಿಪಡಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಆದರೆ ಪ್ರಾಧಿಕಾರದವತಿಯಿಂದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ (Corporate Social Responsiblity) 7 ಕೆರೆಗಳನ್ನು ಅಭಿವೃದ್ಧಿಪಡಿಸಲು ಒಂಡಬಡಿಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಆ ಕೆರೆಗಳ ರಕ್ಷಣೆ, ನೀರಿನ ಮಾಲಿನ್ಯ ತಡೆಯವುದು ಹಾಗೂ ಸೌಂದರ್ಯೀಕರಣಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಪ್ರಸ್ತಾಪಿಸಿದೆ. (ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ. |

ಸಂಖ್ಯೆ: MID 13 LCQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

## ಶ್ರೀ ಹೆಚ್.ಎಂ. ರಮೇಶ ಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :996ಕ್ಕೆ ಅನುಬಂಧ–1

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಶಾಶ್ವತ ಉತ್ತರಾಧಿಕಾರಿ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಸ್ವತ್ತನ್ನು ಧಾರಣ ಮಾಡುವ ಅಧಿಕಾರವಿರುವ ನಿಗಮಿತ ನಿಕಾಯವಾಗಿರುತ್ತದೆ. ಅದರಂತೆ ಇದಕ್ಕೆ ತನ್ನ ಹೆಸರಿನಿಂದ ದಾವೆ ಹೂಡುವ ಮತ್ತು ದಾವೆಗೆ ಗುರಿಯಾಗುವ ಅಧಿಕಾರವನ್ನು ಹೊಂದಿರುತ್ತದೆ.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಈ ಹೆಸರಿನ ಸಂಸ್ಥೆಗೆ ಸನ್ಮಾನ್ಯ ಮುಖ್ಯ ಮಂತ್ರಿಯವರು ಅಧ್ಯಕ್ಷರು ಹಾಗೂ ಮಾನ್ಯ ಸಣ್ಣ ನೀರಾವರಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಕಾರ್ಯದರ್ಶಿ ದರ್ಜೆಯ 15 ಅಧಿಕಾರಿ ಸದಸ್ಯರುಗಳು ಮತ್ತು 4 ಅಧಿಕಾರೇತರ ಸದಸ್ಯರುಗಳನ್ನು ಹೊಂದಿರುತ್ತದೆ. 15 ಅಧಿಕಾರಿ ಸದಸ್ಯರುಗಳ ಪೈಕಿ ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆರವರು ಸದಸ್ಯ ಕಾರ್ಯದರ್ಶಿ ಹಾಗೂ ಪದನಿಮಿತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆ.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2014 ಮತ್ತು 2018 ರ ತಿದ್ದುಪಡಿಯನ್ವಯ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಈ ಕೆಳಕಂಡ ಪ್ರಕಾರ್ಯಗಳನ್ನು ಹೊಂದಿರುತ್ತದೆ.

(1) ಕೆರೆಯ ಒತ್ತುವರಿಯನ್ನು ಪ್ರತಿಬಂಧಿಸುವುದು ಮತ್ತು ತೆರವುಗೊಳಿಸುವುದು ಒಳಗೊಂಡಂತೆ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಬರುವ ಎಲ್ಲಾ ಕೆರೆಗಳ ಮೇಲೆ ನಿಯಾಮಕ ನಿಯಂತ್ರಣವನ್ನು ಹೊಂದಿರುವುದು;

(2) ಕ್ಷೀಣಿಸುತ್ತಿರುವ ಅಂತರ್ಜಲವನ್ನು ಮರುಭರ್ತಿಗೊಳಿಸಲು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು, ಸ್ಥಳೀಯ ಮತ್ತು ಇತರ ಪ್ರಾಧಿಕಾರಿಗಳ ನೆರವಿನೊಂದಿಗೆ ಸಮಗ್ರ ಸಂಪರ್ಕವನ್ನು ಸಾಧಿಸಿಕೊಳ್ಳುವ ಮೂಲಕ ಕೆರೆಗಳನ್ನು, ಕೊಳಗಳನ್ನು, ಸರೋವರಗಳನ್ನು ರಕ್ಷಿಸುವುದು, ಸಂರಕ್ಷಿಸುವುದು, ಜೀರ್ಣೋದ್ಧಾರಗೊಳಿಸುವುದು, ಪುನರ್ ರೂಪಿಸುವುದು ಮತ್ತು ಪೂರ್ವಸ್ಥಿತಿಗೆ ತರುವುದು;

(3) ಯಾವುದೇ ಅಥವಾ ಎಲ್ಲಾ ಕೆರೆಗಳಿಗೆ ಸಂಬಂಧಿಸಿದಂತೆ ಪರಿಸರಾತ್ಮಕ ಪ್ರಭಾವಗಳ ನಿರ್ಧರಣಾ ಅಧ್ಯಯನವನ್ನು ಕೈಗೊಳ್ಳುವುದು;

(4) ಭೌಗೋಳಿಕ ಮಾಹಿತಿ ವ್ಯವಸ್ಥೆಯ ಸಹಾಯದೊಂದಿಗೆ ಕೆರೆಗಳು ಮತ್ತು ಅವುಗಳ ಸುತ್ತಮುತ್ತಲ ಪ್ರದೇಶಗಳ ಪರಿಸರಾತ್ಮಕ ಯೋಜನೆ ಮತ್ತು ನಕ್ಷೆಯ ರಚನೆಯನ್ನು ಕೈಗೆತ್ತಿಕೊಳ್ಳುವುದು ಮತ್ತು ಕೆರೆಗಳು ಹಾಗೂ ಅವುಗಳ ಜಲಾನಯನಗಳ ಅಂಕಿಅಂಶಗಳನ್ನು (ಡೇಟಾಬೇಸ್) ಮತ್ತು ಅಟ್ಲಾಸನ್ನು ಸಿದ್ಧಪಡಿಸುವುದು;

(5) ಕೆರೆಗಳ ಸಮಗ್ರ ಅಭಿವೃದ್ಧಿಗೆ ಯೋಜನೆಯನ್ನು ಸಿದ್ಧಪಡಿಸುವುದು ಹಾಗೂ ಕೆರೆಗಳ ವೆಚ್ಚ ಮತ್ತು ಅಭಿವೃದ್ಧಿಯನ್ನು ಮೇಲ್ವಿಚಾರಿಸುವುದು.

(6) ಸಮಪ್ರಮಾಣದ ಆರ್ಥಿಕ ಬೆಳವಣಿಗೆ ಮತ್ತು ಕೃಷಿಯಲ್ಲಿನ ಸಾಮರ್ಥ್ಯಕ್ಕಾಗಿ ಭೂಮಿ ಮತ್ತು ಜಲನಿರ್ವಹಣೆಯ ಸಂಯೋಜಿತ ಪ್ರಯತ್ನದ ಮುಖಾಂತರ ಕೆರೆಯ ಹೂಳನ್ನು ತೆಗೆಯುವುದು ಹಾಗೂ ಜಲಸಂಪನ್ಮೂಲ ಸಾಮರ್ಥ್ಯವನ್ನು ಮತ್ತು ಕೃಷಿ ಉತ್ಪಾದಕತೆಯನ್ನು ಪ್ರೋತ್ಸಾಹಿಸುವುದು;

(7) ರೈತರ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಮತ್ತು ಅವರ ನೈಸರ್ಗಿಕ ಸಂಪನ್ಮೂಲಗಳ ಆಧಾರದಲ್ಲಿ ಆದಾಯ, ಉದ್ಯೋಗ ಮತ್ತು ಆರ್ಥಿಕ ಸಾಮರ್ಥ್ಯವನ್ನು ಗರಿಷ್ಠಗೊಳಿಸಲು ವಿವಿಧ ಕೃಷಿ ಉದ್ದಿಮೆಗಳನ್ನು ಸಂಯೋಜಿಸುವುದು, ಪ್ರೋತ್ಸಾಹಿಸುವುದು;

(8) ಹೆಚ್ಚುವರಿ ಆದಾಯದ ಉತ್ಪತ್ತಿಗಾಗಿ ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು;

(9) ಚರಂಡಿಯ ಕಶ್ಮಲಗಳನ್ನು ಕಡಿಮೆ ಮಾಡುವ ಮತ್ತು ಚರಂಡಿಯ ರೊಚ್ಚನ್ನು ಕೆರೆಗಳಿಗೆ ಹರಿಯಬಿಡದಿರುವುದರ ಮೂಲಕ ಜಲ ಜೀವವೈವಿಧ್ಯ, ಜಲಪಕ್ಷಿಗಳು ಮತ್ತು ಜಲೀಯ ಸಸ್ಯಗಳನ್ನು ಸುಧಾರಿಸುವುದು ಮತ್ತು ಅವುಗಳಿಗೆ ಬೇಕಾದ ಪರಿಸರವನ್ನು (ಜೌಗು ಭೂಮಿ) ಸೃಜಿಸುವುದು;

(10) ಮಳೆ (ಸ್ಟಾರ್ಮ್) ನೀರು ಚರಂಡಿ ವ್ಯವಸ್ಥೆಯ ಮೂಲಕ ನೀರು ಸಂಗ್ರಹಣೆಗಾಗಿ ಸೌಲಭ್ಯ ಕಲ್ಪಿಸುವುದು, ಸೂಕ್ತವಾದ ಮಣ್ಣಿನ ಮತ್ತು ನೀರಿನ ಸಂರಕ್ಷಣಾ ಕ್ರಮಕೈಗೊಳ್ಳುವ ಮೂಲಕ ಕೆರೆಗಳ ಹೂಳನ್ನು ಕಡಿಮೆ ಮಾಡುವುದು.

(11) ಅವಶ್ಯಕತೆಗನುಸಾರವಾಗಿ ನೀರಿನ ಗುಣಮಟ್ಟವನ್ನು ಸುಧಾರಿಸುವುದು ಮತ್ತು ಆ ಬಗ್ಗೆ ನಿಗಾವಹಿಸುವುದು, ಕೆರೆಯ ಜೀವಿ ಪರಿಸ್ಥಿತಿಯನ್ನು ಸಂರಕ್ಷಿಸುವುದು ಹಾಗೂ ಗೃಹ ಬಳಕೆಯ ಮತ್ತು ಕೈಗಾರಿಕಾ ಮಾಲಿನ್ಯಗಳಿಂದ ಅವುಗಳನ್ನು ಸಂರಕ್ಷಿಸುವುದು;

(12) ಕುಡಿಯುವುದಕ್ಕಾಗಿ, ನೀರಾವರಿಗಾಗಿ, ಪ್ರವಾಸೋದ್ಯಮ ಉದ್ದೇಶಗಳಿಗಾಗಿ ಅಥವಾ ಪ್ರಾಧಿಕಾರವು ನಿರ್ಧರಿಸಬಹುದಾದಂಥ ಯಾವುದೇ ಇತರ ಉದ್ದೇಶಗಳಿಗಾಗಿ ಕೆರೆಗಳನ್ನು ಬಳಸಿಕೊಳ್ಳುವುದು ಅಥವಾ ಬಳಸಿಕೊಳ್ಳಲು ಅನುಮತಿಸುವುದು;

(13) ಸಮುದಾಯಗಳ ಮತ್ತು ಸ್ವಯಂ ಸೇವಾ ಏಜೆನ್ಸಿಗಳು ಕೆರೆಯ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು ಮತ್ತು ಕೆರೆಯನ್ನು ಸಂರಕ್ಷಿಸುವುದು, ಕಾಪಾಡುವುದು ಮತ್ತು ರಕ್ಷಿಸುವುದು ಇವುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು;

(14) ಸರ್ಕಾರ ಅಥವಾ ಯಾವುದೇ ಸಂಸ್ಥೆಯು ಇದಕ್ಕೆ ಕಳುಹಿಸಬಹುದಾದಂಥ ಯಾವುದೇ ವಿಷಯದ ಮೇಲೆ ಸಲಹೆಯನ್ನು ನೀಡುವುದು;

(15) ಕೆರೆಗಳಿಗೆ ಸಂಬಂಧಿಸಿದ ಎಲ್ಲಾ ಪ್ರಸಕ್ತ ವಿಷಯಗಳ ಮೇಲೆ ಸಮಗ್ರ ಮತ್ತು ಸಮನ್ವಯಗೊಳಿಸಿದ ಪ್ರಾಯೋಗಿಕ ಸಂಶೋಧನೆಗೆ ಪ್ರೋತ್ಸಾಹಿಸುವುದು;

(16) ಈ ಅಧಿನಿಯಮದ ಉದ್ದೇಶಗಳನ್ನು ಸಾಧಿಸಲು, ಪ್ರಾಧಿಕಾರವು, ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ, ಅವಶ್ಯಕ, ಅನುಕೂಲಕರ ಅಥವಾ ಆನುಷಂಗಿಕವೆಂದು ಪರಿಗಣಿಸಬಹುದಾದ ಅಂಥ ಇತರ ಕಾರ್ಯಗಳನ್ನು ಮಾಡುವುದು;

(17) ರಾಜ್ಯದಲ್ಲಿನ ಎಲ್ಲಾ ಕೆರೆಗಳ ಸಬಲ ಅಂಕಿಅಂಶ (ಸ್ಟ್ರಾಂಗ್ ಡಾಟಾಬೇಸ್)ವನ್ನು ಸೃಜಿಸುವುದು ಮತ್ತು ಕೆರೆಗಳಿಗಾಗಿ ನಡೆಯುವ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳನ್ನು ನಿಯತಕಾಲದಲ್ಲಿ ದಾಖಲಿಸುವುದು.

ಶ್ರೀ ಹೆಚ್.ಎಂ. ರಮೇಶ ಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 996 ಕ್ಕೆ ಅನುಬಂಧ – 2

| ಕ್ರ ಸಂ | ಜಿಲ್ಲೆ | ಒಟ್ಟು ಕೆರೆಗಳ ಸಂಖ್ಯೆ | ಇತರೆ ಇಲಾಖೆಯಲ್ಲಿರುವ/ ನಿರ್ವಹಣೆಯಲ್ಲಿರುವ ಕೆರೆಗಳ ಸಂಖ್ಯೆ | ಕೆರೆಗಳ ಒಟ್ಟು ವಿಸ್ತೀರ್ಣ | ಅಳತೆಯಾಗಿರುವ ಕೆರೆಗಳ | | ಅಳತೆ ಮಾಡಿಸಲು ಬಾಕಿ ಇರುವ ಕೆರೆಗಳ | | ಒತ್ತುವರಿ ಗುರುತಿಸಿರುವ ಕೆರೆಗಳ | | ಒತ್ತುವರಿ ತೆರವುಗೊಳಿಸಿದ ಕೆರೆಗಳ | | ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಕೆರೆಗಳ | | ಒತ್ತುವರಿಯಿಂದ ಮುಕ್ತವಿರುವ ಕೆರೆಗಳ | |
|---|---|---|---|---|---|---|---|---|---|---|---|---|---|---|---|---|
| | | | | ಎಕರೆ | ಸಂಖ್ಯೆ | ವಿಸ್ತೀರ್ಣ (ಎಕರೆ) | ಸಂಖ್ಯೆ | ವಿಸ್ತೀರ್ಣ (ಎಕರೆ) | ಸಂಖ್ಯೆ | ವಿಸ್ತೀರ್ಣ (ಎಕರೆ) | ಸಂಖ್ಯೆ | ವಿಸ್ತೀರ್ಣ (ಎಕರೆ) | ಸಂಖ್ಯೆ | ವಿಸ್ತೀರ್ಣ (ಎಕರೆ) | ಸಂಖ್ಯೆ | ವಿಸ್ತೀರ್ಣ (ಎಕರೆ) |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1 | ಬಾಗಲಕೋಟೆ | 270 | 253 | 5538 | 268 | 5526 | 2 | 12 | 86 | 232 | 20 | 100 | 66 | 132 | 182 | 5294 |
| 2 | ಬೆಂಗಳೂರು ಗ್ರಾಮಾಂತರ | 710 | | 30033 | 710 | 30033 | 0 | 0 | 643 | 6252 | 544 | 5182 | 99 | 1070 | 67 | 669 |
| 3 | ಬೆಂಗಳೂರು ನಗರ | 837 | 300 | 28263 | 837 | 27548 | 0 | 0 | 744 | 4535 | 152 | 1133 | 592 | 3402 | 245 | 22811 |
| 4 | ಬೆಳಗಾವಿ | 1144 | 1144 | 7761 | 860 | 4308 | 284 | 3453 | 45 | 100 | 12 | 27 | 33 | 73 | 815 | 4234 |
| 5 | ಬಳ್ಳಾರಿ | 221 | 221 | 25907 | 177 | 18314 | 44 | 7591 | 98 | 2630 | 70 | 1967 | 28 | 662 | 133 | 14610 |
| 6 | ಬೀದರ್ | 221 | 203 | 7406 | 85 | 4314 | 136 | 3092 | 35 | 128 | 12 | 30 | 23 | 98 | 63 | 4186 |
| 7 | ಚಾಮರಾಜನಗರ | 585 | 585 | 14507 | 341 | 5575 | 244 | 8932 | 175 | 2935 | 23 | 95 | 152 | 2840 | 166 | 2640 |
| 8 | ಚಿಕ್ಕಬಳ್ಳಾಪುರ | 1487 | 1443 | 45917 | 479 | 15839 | 1008 | 30078 | 310 | 2364 | 180 | 2073 | 130 | 289 | 240 | 3512 |
| 9 | ಚಿಕ್ಕಮಗಳೂರು | 1686 | 1686 | 15632 | 599 | 4658 | 1087 | 10970 | 217 | 300 | 11 | 15 | 206 | 285 | 380 | 2656 |
| 10 | ಚಿತ್ರದುರ್ಗ | 409 | 305 | 46478 | 163 | 19039 | 246 | 27439 | 54 | 2147 | 29 | 1826 | 25 | 321 | 109 | 15072 |
| 11 | ದಕ್ಷಿಣ ಕನ್ನಡ | 515 | 311 | 312 | 426 | 276 | 89 | 36 | 13 | 9 | 4 | 1 | 9 | 8 | 417 | 267 |
| 12 | ದಾವಣಗೆರೆ | 482 | | 21160 | 356 | 12392 | 126 | 8768 | 85 | 693 | 9 | 445 | 76 | 248 | 271 | 11139 |
| 13 | ಧಾರವಾಡ | 1261 | | 7120 | 391 | 2125 | 870 | 4895 | 59 | 107 | 6 | 13 | 53 | 94 | 332 | 1532 |
| 14 | ಗದಗ | 267 | | 3526 | 211 | 2940 | 56 | 586 | 50 | 48 | 2 | 5 | 48 | 44 | 168 | 2898 |
| 15 | ಹಾಸನ | 6600 | | 74460 | 557 | 4032 | 6043 | 70427 | 397 | 1336 | 87 | 108 | 310 | 1227 | 160 | 2696 |
| 16 | ಹಾವೇರಿ | 2058 | 1527 | 22517 | 303 | 7348 | 1755 | 15168 | 81 | 167 | 35 | 102 | 46 | 58 | 222 | 4447 |
| 17 | ಕಲಬುರ್ಗಿ | 149 | | 11430 | 6 | 424 | 143 | 11005 | 0 | 0 | 0 | 0 | 0 | 0 | 6 | 423 |
| 18 | ಕೊಡಗು | 547 | 547 | 427 | 362 | 348 | 185 | 78 | 74 | 49 | 13 | 14 | 61 | 34 | 288 | 300 |
| 19 | ಕೋಲಾರ | 2592 | | 55747 | 980 | 22020 | 1612 | 31481 | 1007 | 6776 | 351 | 4176 | 656 | 7281 | 683 | 20012 |
| 20 | ಕೊಪ್ಪಳ | 294 | 272 | 6042 | 30 | 487 | 264 | 5560 | 6 | 3 | 0 | 0 | 6 | 3 | 24 | 479 |
| 21 | ಮಂಡ್ಯ | 1009 | 1004 | 23402 | 213 | 12268 | 796 | 11134 | 204 | 2497 | 169 | 2437 | 35 | 99 | 9 | 107 |
| 22 | ಮೈಸೂರು | 1767 | 585 | 17685 | 1588 | 15419 | 179 | 2265 | 789 | 5605 | 738 | 5189 | 51 | 416 | 1716 | 17269 |
| 23 | ರಾಯಚೂರು | 142 | 31 | 3742 | 0 | 0 | 142 | 3742 | 0 | 0 | 0 | 0 | 0 | 0 | 0 | 0 |
| 24 | ರಾಮನಗರ | 936 | | 12610 | 44 | 965 | 892 | 11645 | 26 | 84 | 0 | 0 | 26 | 84 | 18 | 881 |
| 25 | ಶಿವಮೊಗ್ಗ | 4201 | 4003 | 29825 | 890 | 6411 | 3311 | 23413 | 434 | 2123 | 257 | 1014 | 177 | 1109 | 456 | 4288 |
| 26 | ತುಮಕೂರು | 2090 | 2090 | 106478 | 284 | 16010 | 1806 | 90722 | 181 | 810 | 87 | 661 | 94 | 149 | 137 | 3954 |
| 27 | ಉತ್ತರ ಕನ್ನಡ | 2046 | 2046 | 5315 | 1324 | 3165 | 722 | 2150 | 281 | 118 | 157 | 48 | 124 | 70 | 1043 | 3048 |
| 28 | ಉಡುಪಿ | 2040 | 416 | 3052 | 2040 | 3052 | 0 | 0 | 60 | 11 | 14 | 1 | 46 | 10 | 1994 | 3043 |
| 29 | ವಿಜಯಪುರ | 270 | | 13699 | 270 | 13699 | 0 | 0 | 5 | 27 | 5 | 27 | 0 | 0 | 270 | 13699 |
| 30 | ಯಾದಗಿರಿ | 290 | | 11204 | 45 | 4592 | 245 | 6610 | 2 | 8 | 0 | 0 | 2 | 8 | 43 | 3895 |
| | **ಒಟ್ಟು** | **37126** | **18972** | **657195** | **14839** | **263127** | **22287** | **391252** | **6161** | **42094** | **2987** | **26689** | **3174** | **20114** | **10657** | **170061** |

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ ಗೌಡ ರವರು ಮಂಡಿಸಿರುವ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 996ಕ್ಕೆ ಅನುಬಂಧ – 3

| ಕ್ರ ಸಂ. | ಜಿಲ್ಲೆ | ಕೆರೆಯ ಹೆಸರು | ಸಿ.ಎಸ್.ಆರ್.ನಲ್ಲಿ ಅಭಿವೃದ್ಧಿಗೊಳಿಸುತ್ತಿರುವ ಸಂಸ್ಥೆ | ಅಂದಾಜು ಮೊತ್ತ (ರೂ ಕೋಟಿಗಳಲ್ಲಿ) | ಷರಾ |
|---|---|---|---|---|---|
| 1 | ಬೆಂಗಳೂರು ನಗರ | ಹೆಬ್ಬಗೋಡಿ ಕೆರೆ | ಮೆ: ಬಯೋಕಾನ್ ಫೌಂಡೇಶನ್ | 6.50 | ಕಾಮಗಾರಿ ಪೂರ್ಣಗೊಂಡಿದೆ |
| 2 | ಬೆಂಗಳೂರು ನಗರ | ದೊಡ್ಡಬೊಮ್ಮಸಂದ್ರ | ಮೆ: ಬಿ.ಇ.ಎಲ್. | 13.00 | ಕಾಮಗಾರಿ ಪೂರ್ಣಗೊಂಡಿದೆ |
| 3 | ಬೆಂಗಳೂರು ನಗರ | ವೀರಸಂದ್ರ | ಮೆ: ಟೈಟಾನ್ ಕಂಪನಿ | 12.00 | ಕಾಮಗಾರಿ ಪ್ರಗತಿಯಲ್ಲಿದೆ |
| 4 | ಮೈಸೂರು | ಹೆಬ್ಬಾಳ | ಮೆ: ಇನ್ಫೋಸಿಸ್ | 25.00 | ನ------<br>ಕಾಮಗಾರಿ ಪ್ರಗತಿಯಲ್ಲಿದೆ |
| 5 | ಬೆಂಗಳೂರು ನಗರ | ನಲ್ಲೂರಹಳ್ಳಿ | ಮೆ: ಸೇಟ್ರೀ | 4.00 | ಕಾಮಗಾರಿ ಪ್ರಗತಿಯಲ್ಲಿದೆ |
| 6 | ಬೆಂಗಳೂರು ನಗರ | ಚಾಗಲಟ್ಟಿ | ಸಿ.ಎಂ.ಆರ್. ವಿಶ್ವವಿದ್ಯಾಲಯ | 5.25 | ಕಾಮಗಾರಿ ಪ್ರಾರಂಭಿಸಬೇಕಿದೆ |
| 7 | ಬೆಂಗಳೂರು ನಗರ | ನಲ್ಲಕುಂಟೆ ಮಾರಸಂದ್ರ | ಮೆ: ಅನರ್ಘ್ಯ ಫೌಂಡೇಶನ್ | 4.50 | ಕಾಮಗಾರಿ ಪ್ರಗತಿಯಲ್ಲಿದೆ |